Reg. No. [ ]

# BASKALN 302/BSWKALN 302/HRDKALN 302/ BVAKALN 302

III Semester B.A./B.S.W./B.A. (HRD)/B.V.A. Examination, Dec. 2023/Jan. 2024
(NEP-2020) (2023-24 Batch Onwards)

ಕನ್ನಡ

ಕನ್ನಡ ಭಾಷಾ ಪತ್ರಿಕೆ

Shri Dharmasthala Manjunatheshwara College of Business Management Library MANGALORE - 575 003

Time : 2 Hours Max. Marks : 60

I. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ. **(2×8=16)**

1) ಲಾವಣಿಗಳಲ್ಲಿ ವ್ಯಕ್ತಗೊಂಡ ರಾಣಿ ಚೆನ್ನಮ್ಮಳ ಜಾಣ್ಮೆ ಮತ್ತು ಹೋರಾಟದ ವೈಖರಿಯನ್ನು ವಿವರಿಸಿರಿ.

2) ಕೃಷಿಕರ ಕಾಯಕವು 'ಹರಗೋಣ ಬಾ ಹೊಲ' ಕವನದಲ್ಲಿ ವ್ಯಕ್ತಗೊಂಡ ಬಗೆಯನ್ನು ವಿವರಿಸಿರಿ.

3) ಕೃಷಿ ಸಂಬಂಧಿ ಆಚರಣೆಯ ಕಂಬಳದ ಕೋಣಗಳ ಗೆಲುವು ಯಜಮಾನನ ಗೆಲುವು ಹೌದು – ವಿವರಿಸಿರಿ.

4) 'ಇಡ್ಲಿಯ ಇತಿಹಾಸ' ಪ್ರಬಂಧದ ಸ್ವಾರಸ್ಯವನ್ನು ಕುರಿತು ಬರೆಯಿರಿ.

II. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ. **(2×6=12)**

1) 'ಆಗಸ್ಟ್ ವೀರ' ಕತೆಯ ಆಶಯವೇನು ?

2) ಅಡಿಕೆ ಬೆಳೆಗಾರರ ಸಾಮಾಜಿಕ ಜವಾಬ್ದಾರಿಗಳ ಕುರಿತು ವಿವರಿಸಿರಿ.

3) ಹಿಮಾದಾಸ್ ಅವರ ಬಾಲ್ಯದ ಬದುಕು ಮತ್ತು ಕನಸುಗಳನ್ನು ಕುರಿತು ವಿವರಿಸಿರಿ.

4) ಯಾವ ಭಾಷೆಯು ಶಿಕ್ಷಣದ ಮಾಧ್ಯಮವಾಗಬೇಕೆಂದು ಚಿಂತಕರು ಬಯಸುತ್ತಾರೆ ?

III. ಈ ಕೆಳಗಿನ ಪದ್ಯ ಭಾಗಗಳಲ್ಲಿ ಯಾವುದಾದರೂ **ಒಂದಕ್ಕೆ** ಭಾವ, ಸಂದರ್ಭ, ಸ್ವಾರಸ್ಯವನ್ನು ವಿವರಿಸಿರಿ. **(1×4=4)**

1) ಬನದ ಕರಡಿಯ ಹಾಗೆ
ಚಿಕ್ಕ ಮಕ್ಕಳ ಹೊತ್ತು
ಗಂಡನ ಸಾಕಿದಳು ಕಾಸು ಗಂಟಿಕ್ಕಿದಳು
ನೊಂದ ನಾಯಿಯ ಹಾಗೆ ಬೈದು, ಗೊಣಗಿ, ಗುದ್ದಾಡಿದಳು ;
ಸಣ್ಣತನ, ಕೊಂಕು, ಕೆರೆದಾಟ ಕೋತಿಯ ಹಾಗೆ ;
ಎಲ್ಲಕ್ಕೆ ಮನೆತನದ ಉದ್ಧಾರ ಸೂತ್ರ
ಈಕೆ ಉರಿದೆದ್ದಾಳು
ಮಗ ಕೆಟ್ಟರೆ, ಗಂಡ ಬೇರೆ ಕಡೆಗೆ ಹೋದಾಗ ಮಾತ್ರ

**ಅಥವಾ**

2) ಏನನಾಡಿದಡೇನು ಫಲ ದೈ
ವಾನುಕೂಲ್ಯದ ಕುಣಿಕೆ ಬೇರಿಹು
ದಾ ನರೇಂದ್ರನ ಸಾರಿ ಸೋತುದು ನಿಮಿಷ ಮಾತ್ರದಲಿ
ಆ ರೂಢಿಯ ಹತ್ತು ಸಾವಿರ
ಮಾನಿನಿಯರನು ಮತ್ತೆ ಸೋತನು
ಮಾನನಿಧಿಯೇ ಮತ್ತೆ ಪಣವೇನೆಂದನಾ ಶಕುನಿ

IV. ಈ ಕೆಳಗಿನ ಪದ್ಯ ಭಾಗಗಳಲ್ಲಿ ಯಾವುದಾದರೂ **ಮೂರಕ್ಕೆ** ಭಾವ, ಸಂದರ್ಭ ಬರೆಯಿರಿ. **(3×4=12)**

1) ಸತ್ತವರ ನಂಬುಗೆಗೆ ಎರಡನೆಣಿಸದಿರಿ.
2) ಅರಮನಿಯವರಿಗೆಲ್ಲಾ ತಪ್ಪಿತೋ ದಿಕ್ಕ.
3) ಯೌವನವ ಕಳೆದವಳು ಚಿಂದಿಯ ಸೀರೆ ಉಟ್ಟುಕೊಂಡು.
4) ಎತ್ತಲ್ಲ ಅವು ನಮ್ಮ ಮುತ್ತುಗೋಳು.
5) ಕರೆಯಿ ಬಾರದಡಾ ಜನಾರ್ದನನಾಣೆಯೆಂದನು.

V. ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ಕುವೆಂಪು.
2) ಶಕುನಿ.
3) ಪಿ. ಲಂಕೇಶ್.
4) ಪುಲಪೇಡಿ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(8×1=8)**

1) 'ರಕ್ತ ತರ್ಪಣ' ಕವಿತೆಯನ್ನು ಯಾವ ಕವನ ಸಂಕಲನದಿಂದ ಆರಿಸಲಾಗಿದೆ ?
2) 'ಸಿಕಂದರ್ ಕಾಪು' ಎನ್ನುವ ಕಾವ್ಯನಾಮದಲ್ಲಿ ಬರೆಯುವ ಕವಿ ಯಾರು ?
3) ದ. ರಾ. ಬೇಂದ್ರೆಯವರ ಪೂರ್ಣನಾಮಧೇಯವೇನು ?
4) 'ಕುಸುಮಬಾಲೆ' ಕೃತಿಯ ಕರ್ತೃ ಯಾರು ?
5) ಕುಮಾರವ್ಯಾಸನ ನಿಜನಾಮಧೇಯವೇನು ?
6) ಕಡಲತಡಿಯ ಭಾರ್ಗವ ಎಂದು ಪ್ರಖ್ಯಾತಿಯನ್ನು ಪಡೆದ ಕವಿ ಯಾರು ?
7) ಸೇಡಿಯಾಪು ಕೃಷ್ಣಭಟ್ಟರ ಹೆತ್ತವರ ಹೆಸರೇನು ?
8) ಗಂಗಾ ಪಾದೇಕಲ್ ಅವರ ಮೊದಲ ಕಥಾ ಸಂಕಲನದ ಹೆಸರೇನು ?

---

MANGALORE - 575 003